# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

## KARNATAKA SCHOOL EXAMINATION ANS ASSESSMENT BORAD

MALLESHWARAM BANGALORE-560026

**2025–26ರ ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆಪತ್ರಿಕೆ**

**MODEL QUESTION PAPER : 2025–26**

**ವಿಷಯ : ಸಮಾಜಶಾಸ್ತ್ರ**

**SUBJECT : SOCIOLOGY**

**(ಕನ್ನಡ ಮಾಧ್ಯಮ / KANNADA MEDIUM)**

**ಪರೀಕ್ಷಾ ಸಮಯ : 3 ಗಂಟೆ 15 ನಿಮಿಷಗಳು** | **ವಿಷಯ ಸಂಕೇತ-95 K**

**ಗರಿಷ್ಠ ಅಂಕಗಳು : 80** | **Subject Code : 95 K**

---

## ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು

1. ಈ ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 47 ಪ್ರಶ್ನೆಗಳು ಇವೆ.
2. ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ ಉತ್ತರಿಸಲು ನಿಗಧಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ** **10 X 1 = 10**

1) ಸಾಮಾಜಿಕ ಸಂಬಂಧಗಳಲ್ಲಿ ಕಂಡು ಬರುವ ಪರಿವರ್ತನೆ

A) ರಾಜಕೀಯ ಬದಲಾವಣೆ

B) ಸಾಮಾಜಿಕ ಬದಲಾವಣೆ

C) ಆರ್ಥಿಕ ಬದಲಾವಣೆ

D) ತಾಂತ್ರಿಕ ಬದಲಾವಣೆ

2) ಅನಿಯೋಜಿತ ಬದಲಾವಣೆಗೆ ಒಂದು ಉದಾಹರಣೆ

A) ಭೂಕಂಪಗಳು

B) ಶಿಕ್ಷಣ

C) ಆಧುನಿಕರಣ

D) ಕೈಗಾರಿಕೆಗಳು

3) ಭಾರತ ಸರ್ಕಾರ ಜನಸಂಖ್ಯೆಯನ್ನು ನಿಯಂತ್ರಿಸಲು ಜಾರಿಗೆ ತಂದ ಯೋಜನೆ

A) ಶಕ್ತಿ ಯೋಜನೆ

B) ಸ್ತ್ರೀಶಕ್ತಿ ಯೋಜನೆ

C) ಸಾಮಾಜಿಕ ಯೋಜನೆ

D) ಕುಟುಂಬ ಕಲ್ಯಾಣ ಯೋಜನೆ

4) ಈ ವರ್ಷದಿಂದ ಜಾಗತೀಕರಣ ಖಾಸಗಿಕರಣ ಹಾಗೂ ಉದಾರಿಕರಣ ನೀತಿಗಳಿಂದ ಆರ್ಥಿಕ ಅಸಮತೋಲನ ಹೆಚ್ಚಾಗಿದೆ.

A) 1992

B) 1993

C) 1994

D) 1995

5) ಬೌದ್ಧ ಧರ್ಮದ ಸ್ಥಾಪಕ

A) ಮಹಾವೀರ

B) ಗೌತಮ ಬುದ್ಧ

C) ಅಶೋಕ

D) ತೀರ್ಥಂಕರ

6) "ಅಸ್ಪೃಶ್ಯತೆಯ ಆಚರಣೆ" ಪಾಪ ಎಂದು ಹೇಳಿದರು

A) ಸರ್ದಾರ್ ಪಟೇಲ್

B) ನೆಹರು

C) ಡಾ. ಬಿ. ಆರ್.ಅಂಬೇಡ್ಕರ್

D) ಗಾಂಧೀಜಿ

7) ಮೂಲಭೂತ ಬದಲಾವಣೆಗಳನ್ನು ತರುವ ಪ್ರಯತ್ನಗಳನ್ನು ಹೀಗೆಂದು ಕರೆಯುವರು

A) ಕ್ರಾಂತಿಕಾರಿ ಚಳುವಳಿಗಳು

B) ಕ್ರಾಂತಿಗಳು

C) ದಂಗೆಗಳು

D) ಬಂಡಾಯಗಳು

8) ಆತ್ಮರಾಮ ಪಾಂಡುರಂಗ ರವರು ಪರಮಹಂಸ ಸಭೆಯನ್ನು ಹೀಗೆಂದು ಕರೆದರು

A) ಸತ್ಯಶೋಧಕ ಸಮಾಜ

B) ಪ್ರಾರ್ಥನಾ ಸಮಾಜ

C) ಆರ್ಯ ಸಮಾಜ

D) ಬ್ರಹ್ಮ ಸಮಾಜ

9) ಬ್ರಿಟಿಷರ ವಿರುದ್ಧ ಹೋರಾಡಿದ ಕಿತ್ತೂರಿನ ರಾಣಿ

A) ಚೆನ್ನಮ್ಮ

B) ಅಬ್ಬಕ್ಕ

C) ಲಕ್ಷ್ಮೀಬಾಯಿ

D) ಅಹಲ್ಯಾ ಬಾಯಿ

10) "ಕೇಸರಿ" ವೃತ್ತ ಪತ್ರಿಕೆಯನ್ನು ಪ್ರಕಟಿಸಿದವರು

A) ಬಿ.ಆರ್.ಅಂಬೇಡ್ಕರ್

B) ಮಹಾತ್ಮ ಗಾಂಧಿ

C) ಬಾಲ ಗಂಗಾಧರ ತಿಲಕ್

D) ಜವಹರ್ ಲಾಲ್ ನೆಹರು

**II. 11) ಎ ಪಟ್ಟಿಯನ್ನು ಬಿ ಪಟ್ಟಿಯೊಂದಿಗೆ ಹೊಂದಿಸಿ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ** **5 X 1 = 5**

| ಎ ಪಟ್ಟಿ | ಬಿ ಪಟ್ಟಿ |
|---|---|
| A) ಭಾರತದ ನವೋದಯದ ಪಿತಾಮಹ | i) ಮಾವೊ |

| | | |
|---|---|---|
| B) | ಬಾರ್ಡೋಲಿ ಸತ್ಯಾಗ್ರಹ | ii) ದಯಾನಂದ ಸರಸ್ವತಿ |
| C) | ವೇದಗಳಿಗೆ ಹಿಂತಿರುಗಿ | iii) ಗಾಂಧೀಜಿ |
| D) | ಚಂಪಾರಣ್ಯ ಸತ್ಯಾಗ್ರಹ | iv) ರಾಜಾರಾಮ್ ಮೋಹನ್ ರಾಯ್ |
| E) | ಚೀನಾದ ಕ್ರಾಂತಿಕಾರ | v) ಸರ್ದಾರ್ ಪಟೇಲ್ |
| | | vi) ಅನಿಬೆಸೆಂಟ್ |
| | | vii) ಸ್ವಾಮಿ ವಿವೇಕಾನಂದ |

**III. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ** **15 X 1 = 15**

12) ಸಾಮಾಜಿಕ ಬದಲಾವಣೆ ಎಂದರೇನು?

13) ನಿಯೋಜಿತ ಬದಲಾವಣೆಗೆ ಒಂದು ಉದಾಹರಣೆ ಕೊಡಿ.

14) ಶಿಕ್ಷಣವು ಯಾವುದರ ಮೂಲ ಸಾಧನ?

15) ಪ್ರಾದೇಶಿಕ ಅಸಮತೋಲನ ಎಂದರೇನು?

16) ಸಾಮಾಜಿಕ ಪರಿವರ್ತನೆಗೆ ಅಡ್ಡಿಯಾಗಿರುವ ಅಂಶ ಯಾವುದು?

17) "ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ" ಎಂಬ ಪುಸ್ತಕವನ್ನು ಲೇಖಕರು ಯಾರು?

18) ಭಾರತೀಯ ಸಮಾಜದ ಅವಿಭಾಜ್ಯ ಅಂಗ ಯಾವುದು?

19) ಸಾಮಾಜಿಕ ಚಳುವಳಿಯ ಮುಖ್ಯ ಗುರಿ ಏನು?

20) ಬ್ರಿಟಿಷ್ ಅಧಿಪತ್ಯದಲ್ಲಿ ಲಾರ್ಡ್ ಬೋರ್ಹರನ್ ರವರಿಗೆ ಗುಲಾಮಗಿರಿಯನ್ನು ತೊಡೆದು ಹಾಕಲು ನೆರವಾದವರು ಯಾರು?

21) ಸತಿ ಸಹಗಮನ ಪದ್ಧತಿ ಎಂದರೇನು?

22) ಎಸ್.ಎಲ್.ನಾಡಲ್ ರವರ ಪ್ರಕಾರ ಬುಡಕಟ್ಟನ್ನು ವ್ಯಾಖ್ಯಾನಿಸಿ.

23) ಗಿಡಮೂಲಿಕೆಯ ಔಷಧಿಗಳ ತಯಾರಿಕೆಯಲ್ಲಿ ಪ್ರಾವಿಣ್ಯತೆಯನ್ನು ಪಡೆದವರು ಯಾರು?

24) "ಬ್ಲಾಕ್ ಪದ್ಧತಿ" ಎಂದರೇನು?

25) ದೂರದರ್ಶನದಲ್ಲಿ ಕೃಷಿಗೆ ಸಂಬಂಧಿಸಿದಂತೆ ಪ್ರಸಾರವಾಗುವ ಒಂದು ಕಾರ್ಯಕ್ರಮವನ್ನು ತಿಳಿಸಿ.

26) ಸಮೂಹ ಮಾಧ್ಯಮ ಎಂದರೇನು?

**IV. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ** **14 X 2 = 28**

27) ನಿಯೋಜಿತ ಮತ್ತು ಅನಿಯೋಜಿತ ಬದಲಾವಣೆ ಇರುವ ವ್ಯತ್ಯಾಸವನ್ನು ಪಟ್ಟಿ ಮಾಡಿ.

28) ಸಾಮಾಜಿಕ ಬದಲಾವಣೆಯ ಮೇಲೆ ಪ್ರಭಾವವಿರುವ ಸಂಪರ್ಕ ಸಾಧನಗಳನ್ನು ಹೆಸರಿಸಿ.

29) ಆರ್ಥಿಕ ಸಂಕಷ್ಟದಲ್ಲಿರುವವರು ಸಾಮಾಜಿಕ ಬದಲಾವಣೆಯನ್ನು ವಿರೋಧಿಸಲು ಕಾರಣವೇನು?

30) ಪಕ್ಕಾ ಆಹಾರ ಕಚ್ಚಾ ಅಹಾರಕ್ಕಿಂತ ವಿಭಿನ್ನವಾಗಿದೆ ಹೇಗೆ?

31) 1856ರ ಹಿಂದೂ ಪುನರ್ ವಿವಾಹ ಕಾಯ್ದೆಯ ಪ್ರಮುಖ ಅಂಶಗಳನ್ನು ತಿಳಿಸಿ.

32) ಕಬೀರ್ ಪಂಥಿಯರು ಸಮಾಜ ಸುಧಾರಿಸಲು ಹೇಗೆ ಪ್ರಯತ್ನಿಸಿದರು?

33) ಸಾಮಾಜಿಕ ಚಳುವಳಿಯ ಉದ್ದೇಶಗಳನ್ನು ಪಟ್ಟಿ ಮಾಡಿ.

34) ಮಹಿಳೆಯರ ಸಮಾನತೆಗಾಗಿ ಹೋರಾಡಿದ ಸಮಾಜ ಸುಧಾರಕರನ್ನು ಹೆಸರಿಸಿ.

35) ಹಂಟರ್ ಶಿಕ್ಷಣ ಆಯೋಗವು ಮಹಿಳಾ ಶಿಕ್ಷಣಕ್ಕೆ ಹೇಗೆ ಪ್ರಾಮುಖ್ಯತೆ ನೀಡಿದೆ?

36) ಡಿ.ಎನ್.ಮಜೂಂದಾರ್ ರವರ ಪ್ರಕಾರ ಬುಡಕಟ್ಟು ಜನಾಂಗವನ್ನು ವ್ಯಾಖ್ಯಾನಿಸಿ.

37) ಭಾರತದಲ್ಲಿ ಬುಡಕಟ್ಟು ಜನಾಂಗದ ಅವನತಿಗೆ ಕಾರಣಗಳನ್ನು ತಿಳಿಸಿ?

38) ಬುಡಕಟ್ಟು ಜನಾಂಗದ ಗುಣಲಕ್ಷಣಗಳನ್ನು ಹೆಸರಿಸಿ.

39) ಸಮೂಹ ಮಾಧ್ಯಮದ ಎರಡು ಪ್ರಕಾರಗಳಾವುವು?

40) ಸಮೂಹ ಮಾಧ್ಯಮವಾಗಿ ರೇಡಿಯೋ ಹೇಗೆ ಪ್ರಮುಖ ಪಾತ್ರವನ್ನು ವಹಿಸುತ್ತದೆ?

**V. ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ** **6 X 3 =18**

41) ಸಾಮಾಜಿಕ ಬದಲಾವಣೆಯ ಸ್ವರೂಪವನ್ನು ವಿವರಿಸಿ.

42) ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗಿರುವ ಅಸಮಾನತೆಯ ಬಗ್ಗೆ ಬರೆಯಿರಿ.

43) ಸಾಮಾಜಿಕ ಬದಲಾವಣೆಗೆ ಜಾತಿ ಎಂಬುದು ಹೇಗೆ ಅಡ್ಡಿಯಾಗಿದೆ ವಿವರಿಸಿ.

44) ಮಹಿಳೆಯರ ಆಸ್ತಿ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಕಾನೂನುಗಳನ್ನು ತಿಳಿಸಿ.

45) ಬುಡಕಟ್ಟು ಜನಾಂಗದವರ ಉನ್ನತಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

46) ಆಧುನಿಕ ಜೀವನದಲ್ಲಿ ಇಂಟರ್ನೆಟ್ ನ ಉಪಯುಕ್ತತೆಯ ಬಗ್ಗೆ ಬರೆಯಿರಿ.

**VI. ಈ ಪ್ರಶ್ನೆಗೆ ನಾಲ್ಕರಿಂದ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.** **1 X 4 = 4**

47) ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರವನ್ನು ವಿವರಿಸಿ.